**ಮೋಟಾರು ವಾಹನ ಅಪಘಾತಗಳ ಪರಿಹಾರ ಮಂಡಳಿ, ಬೆಂಗಳೂರು,**
**1ನೇ ಲಘು ವ್ಯವಹಾರಗಳ ನ್ಯಾಯಾಲಯ ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ ಬೆಂಗಳೂರು**

**ಎಂ.ವಿ.ಸಿ.ಃ 8258/2024**

ಆರ್.ಡಬ್ಲ್ಯೂ **3**

| | | |
|---|---|---|
| **ಸಾಕ್ಷಿದಾರರ ಹೆಸರು** | ಃ | ಡಿ. ಪ್ರದೀಪ್ ಕುಮಾರ್ |
| **ತಂದೆಯ ಹೆಸರು** | ಃ | ಆರ್. ಧನುಷ್‌ಕೊಡಿ |
| **ವಯಸ್ಸು** | ಃ | **29** ವರ್ಷ |
| **ಉದ್ಯೋಗ** | ಃ | ಕಿರಿಯ ಸಹಾಯಕ, ಆರ್.ಟಿ.ಓ, ವಿರುದನಗರ, |
| **ವಾಸ ಸ್ಥಳ** | ಃ | ವಿರುದನಗರ |

**ದಿನಾಂಕಃ 09.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ 1ನೇ ಎದುರುದಾರರ ಪರ ಮಾನ್ಯ ವಕೀಲರಿಂದ.**

ನ್ಯಾಯಾಲಯದಿಂದ ಸಮನು ಬಂದ ಕಾರಣ ನಾನು ಈ ದಿನ ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ ಮತ್ತು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸುತ್ತಿದ್ದೇನೆ.

ಸುಮಾರು 2-3 ತಿಂಗಳಿನಿಂದ ಮೇಲೆ ತಿಳಿಸಿದ ಕಛೇರಿಯಲ್ಲಿ ಕಿರಿಯ ಸಹಾಯಕನಾಗಿ ಕೆಲಸ ಮಾಡುತ್ತಿದ್ದೇನೆ.

ಅಧಿಕಾರ ಪತ್ರವನ್ನು **ನಿ.ಆರ್ 2** ಎಂದು, ಟಿ.ಎನ್-67-ಬಿಕ್ಯೂ-5458 ಸಂಖ್ಯೆಯ ವಾಹನದ ವಿವರಗಳ ದಾಖಲಾತಿಗಳ ಧೃಡಿಕೃತ ಪ್ರತಿಯನ್ನು **ನಿ.ಆರ್ 3** ಎಂದು ಗುರುತಿಸಲಾಯಿತು.

ಮೇಲೆ ತಿಳಿಸಿದ ವಾಹನಕ್ಕೆ ದಿನಾಂಕ 29.09.2023ರಂದು ಪರ್ಮಿಟ್ ನೀಡಲಾಗಿದ್ದು, ಅದು ದಿನಾಂಕ 28.09.2028ರವರೆಗೆ ಚಾಲ್ತಿಯಲ್ಲಿ ಇರುತ್ತದೆ. ಆಪಾದಿತ ವಾಹನಕ್ಕೆ ಆಂಧ್ರದಲ್ಲಿ ಚಲಿಸಲು ಪರ್ಮಿಟ್ ಇತ್ತು.

ಸಾಕ್ಷಿದಾರನನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಬೇಕೆಂದು 1ನೇ ಎದುರುದಾರರ ಪರ ಮಾನ್ಯ ವಕೀಲರು ಕೋರಿದ್ದು ಸಾಕ್ಷಿದಾರನನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲಾಯಿತು ಮತ್ತು ಸಾಕ್ಷಿದಾರನನ್ನು ಪಾಟೀ ಸವಾಲಿಗೆ ಗುರಿಪಡಿಸಲು ಅನುಮತಿಸಲಾಯಿತು.

**ಪಾಟೀ ಸವಾಲುಃ 1ನೇ ಎದುರುದಾರರ ಪರ ಮಾನ್ಯ ವಕೀಲರಿಂದ.**

ಅಪಘಾತವಾದ ದಿನಾಂಕದಂದು ಆಪಾದಿತ ವಾಹನಕ್ಕೆ ಪರ್ಮಿಟ್ ಇರಲಿಲ್ಲ ಎಂದರೆ ಸರಿಯಲ್ಲ. ಆಪಾದಿತ ವಾಹನಕ್ಕೆ ದಿನಾಂಕ 28.09.2024ರಿಂದ ದಿಃ 28.09.2025ರವರೆಗೆ ರಾಷ್ಟ್ರೀಯ ಪರ್ಮಿಟ್ ಇತ್ತು. ಸದರಿ ಪರ್ಮಿಟ್ ಊರ್ಜಿತವಾಗಿರುವುದಲ್ಲ ಎಂದರೆ ಸರಿಯಲ್ಲ. ಪರ್ಮಿಟ್ ನೀಡಿದ ಬಗ್ಗೆ ಮತ್ತು ಅದಕ್ಕೆ ಹಣ ಪಾವತಿಸಿದ ಬಗ್ಗೆ ಆನ್ ಲೈನ್ ಮೂಲಕ ಕಂಡುಬರುವುದಿಲ್ಲ ಎಂದರೆ ಸರಿಯಲ್ಲ. ಹಣ ಪಾವತಿಸದೇ ಇದ್ದಲ್ಲಿ ಪರ್ಮಿಟ್ ನೀಡುವುದಿಲ್ಲ.

**ಪಾಟೀ ಸವಾಲುಃ ಅರ್ಜಿದಾರರ ಪರ ಮಾನ್ಯ ವಕೀಲರಿಂದ.**

ಅಪಘಾತವಾದ ದಿನಾಂಕದಂದು ಆಪಾದಿತ ವಾಹನಕ್ಕೆ ರಾಷ್ಟ್ರೀಯ ಪರ್ಮಿಟ್‌ಊರ್ಜಿತವಾಗಿತ್ತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**